# ಜಾನ್ ನ್ಯಾಶ್ ಎಂಬ ಅಸ್ವಸ್ಥ ಜೀನಿಯಸ್



ಜಾನ್ ನ್ಯಾಶ್

**ಸ್ಕಿಜೋಫ್ರೀನಿಯಾ ರೋಗಕ್ಕೆ ತುತ್ತಾಗಿ, ಹುಚ್ಚಾಸ್ಪತ್ರೆ ಸೇರಿದ್ದ ಜಾನ್ ನ್ಯಾಶ್, 'ಅಸ್ವಸ್ಥ ಮನಸ್ಸು ಹೆಚ್ಚು ಸೃಜನಶೀಲ' ಎನ್ನುವುದಕ್ಕೆ ಆತ ನೊಬೆಲ್ ಪ್ರಶಸ್ತಿ ಗಳಿಸಿದ್ದೇ ಸಾಕ್ಷಿ. ಮೇ 24ರಂದು ವಿಶ್ವ ಸ್ಕಿಜೋಫ್ರೀನಿಯಾ ದಿನ. 80ರ ಅಜ್ಜ ನ್ಯಾಶ್‌ನನ್ನು ನೆನಪಿಸಿಕೊಳ್ಳೋಣ.**

■ ಡಾ. ಕೆ.ಎಸ್. ಪವಿತ್ರ

ಅರ್ಥಶಾಸ್ತ್ರದ ಪರಿಚಯ ಇದ್ದವರಿಗೆ ಜಾನ್ ನ್ಯಾಶ್ ಎಂಬ ಹೆಸರೂ ಸುಪರಿಚಿತವೇ. ಅರ್ಥಶಾಸ್ತ್ರ, ಗಣಿತ ಶಾಸ್ತ್ರದ ಹಲವು ಸಿದ್ಧಾಂತಗಳನ್ನು ಮಂಡಿಸಿದ ಜಾನ್ ನ್ಯಾಶ್ 1994ರ ನೊಬೆಲ್ ಪಾರಿತೋಷಕ ಗೆದ್ದಾತ. ನೊಬೆಲ್ ಪಾರಿತೋಷಕ ಗೆದ್ದದ್ದಷ್ಟೇ ಆತನ ಸಾಧನೆಯಲ್ಲ. ಜೀವನದುದ್ದಕ್ಕೂ ಸ್ಕಿಜೋಫ್ರೀನಿಯಾ (ಚಿತ್ತವ್ಯಾಕುಲತೆ) ರೋಗದಿಂದ ಬಳಲಿದರೂ ಅದನ್ನು ಬದಿಗೊತ್ತಿ ಮಹತ್ವದ ಕೊಡುಗೆಯನ್ನು ಸಮಾಜಕ್ಕೆ ನೀಡಿದ್ದು ಆತನ ಅಪ್ರತಿಮ ಸಾಧನೆ.

1928ರಲ್ಲಿ ಹುಟ್ಟಿದ ನ್ಯಾಶ್‌ನಿಗೆ ಬಾಲ್ಯದಿಂದಲೇ ಹಲವು ತೊಂದರೆಗಳಿದ್ದವು. ಅವನ ತಂಗಿ ಹೇಳುವಂತೆ 'ಅಣ್ಣ ಯಾವಾಗಲೂ ಮಕ್ಕಳಲ್ಲಿ ಬೇರೆಯೇ ಆಗಿದ್ದ. ತುಂಬಾ ಬುದ್ಧಿವಂತನೂ ಆಗಿದ್ದ. ನನಗೆ ಅವನ ಬಗ್ಗೆ, ಅವನ ನಡವಳಿಕೆಯ ಬಗ್ಗೆ ಸ್ನೇಹಿತರ ಗುಂಪಿನಲ್ಲಿದ್ದಾಗ ತುಂಬ ಮುಜುಗರ ಎನಿಸುತ್ತಿತ್ತು'. ನ್ಯಾಶ್ ಎಷ್ಟು ಬುದ್ಧಿವಂತನೆಂದರೆ, ಆತನ ಬಗೆಗಿನ ಅರ್ಹತಾ ಪತ್ರದಲ್ಲಿ 'ಈ ಮನುಷ್ಯ ಜೀನಿಯಸ್' ಎಂಬ ಒಂದೇ ವಾಕ್ಯ ಇತ್ತಂತೆ!

ಯೌವ್ವನದಲ್ಲಿ ಹಲವು ಸಂಬಂಧಗಳ ತೊಡಕಿಗೆ ನ್ಯಾಶ್ ಗುರಿಯಾದ. ಆದರೆ ಕೊನೆಯಲ್ಲಿ ಆತನಿಗೆ ಎಲಿಸಿಯಾ ಎಂಬ ಪ್ರೇಮಮಯಿಯೇ ಸಿಕ್ಕಿದಳು. ಆತನ ಆತ್ಮಕಥೆ 'ಎ ಬ್ಯೂಟಿಫುಲ್ ಮೈಂಡ್' ಇಂಗ್ಲಿಷ್‌ನಲ್ಲಿ ಸಿನಿಮಾ ಆಗಿಯೂ ಜನಪ್ರಿಯವಾಗಿದೆ.

ಸ್ಕಿಜೋಫ್ರೀನಿಯಾದ ಲಕ್ಷಣಗಳು ಆತನನ್ನು ಕಾಡಲಾರಂಭಿಸಿದ್ದು 1958ರಲ್ಲಿ. ಅಂದರೆ 30ರ ಏರು ಯೌವ್ವನದಲ್ಲಿ. ಅತೀವ ಅನುಮಾನ, ತನ್ನ ಮೇಲೆ ಯಾರೋ ದಾಳಿ ಮಾಡುತ್ತಾರೆಂಬ ಶಂಕೆ, ತನ್ನ ಬಗ್ಗೆ ಪತ್ರಿಕೆಗಳಲ್ಲಿ ಕೆಟ್ಟದ್ದಾಗಿ ಬರೆದಿದ್ದಾರೆಂಬ ಗುಮಾನಿ– ಹೀಗೆ ಹಲವು ಭ್ರಮೆಗಳು ನ್ಯಾಶ್‌ನನ್ನು ಕಾಡಲಾರಂಭಿಸಿದವು. ಈ ಭ್ರಮೆಯ ಸ್ಥಿತಿಯಲ್ಲಿ ಪ್ರಧಾನಿಗೆ, ಶ್ವೇತಭವನಕ್ಕೆ ನ್ಯಾಶ್ ಪತ್ರಗಳನ್ನೂ ಬರೆದ! ಅವನೊಂದಿಗೇ ನರಳಿದವರು ಪತ್ನಿ ಎಲಿಸಿಯಾ ಮತ್ತು ಮಗು. ಕೊನೆಗೆ ವಿಧಿಯಿಲ್ಲದೆ ನ್ಯಾಶ್‌ನನ್ನು ಮಾನಸಿಕ ಆಸ್ಪತ್ರೆಗೆ ದಾಖಲಿಸಬೇಕಾಯಿತು.

ಇದಾದ ನಂತರದ 9 ವರ್ಷಗಳು ನ್ಯಾಶ್– ಎಲಿಸಿಯಾರ ಜೀವನದ ಅತಿ ಕಷ್ಟದ ದಿನಗಳು. ತನ್ನ ಭ್ರಮೆಯಿಂದಾಗಿ ಮತ್ತೆ ಮತ್ತೆ ಚಿಕಿತ್ಸೆಯನ್ನು ನಿರಾಕರಿಸುತ್ತಿದ್ದ ನ್ಯಾಶ್ ದೇಶ ವಿದೇಶಗಳಲ್ಲಿ ಸುತ್ತಾಡುತ್ತಾ, ತೊಂದರೆಗಳಿಗೆ ಒಳಗಾಗಿ ಮಾನಸಿಕ ಆಸ್ಪತ್ರೆಗಳಿಗೆ ದಾಖಲಾದ! ನ್ಯಾಶ್‌ನ ಪತ್ನಿ ಎಲಿಸಿಯಾ ಆತನಿಂದ ದೂರವಾದಳು. 2 ವರ್ಷಗಳ ನಂತರ ಮತ್ತೆ ಅವನೊಂದಿಗೆ ಆಕೆ ಜೀವಿಸಿದರೂ ದಾಂಪತ್ಯದ ಸಂಬಂಧವಿಲ್ಲದೆ ಒಂದೇ ಸೂರಿನಡಿ ಜೀವಿಸುವ ಎರಡು ವ್ಯಕ್ತಿಗಳಂತೆ ಅವರು ಬದುಕಬೇಕಾಯಿತು.

ತನ್ನ ಮನಸ್ಸಿನ ಭ್ರಮೆಗಳನ್ನು ವೈಜ್ಞಾನಿಕವಾಗಿ ಚಿಂತಿಸಬಲ್ಲ ಸಾಮರ್ಥ್ಯ, ಒಲ್ಲದ ಮನಸ್ಸಿನಿಂದಲೇ ತೆಗೆದುಕೊಂಡ ಔಷಧಿಯ ಚಿಕಿತ್ಸೆ, ಪತ್ನಿಯಂತಲ್ಲದಿದ್ದರೂ ಕರುಣೆಯಿಂದ ಸಹಬಾಳ್ವೆ ನಡೆಸಿದ ಎಲಿಸಿಯಾ– ಈ ಎಲ್ಲದರಿಂದಾಗಿ ನ್ಯಾಶ್ 1995ರ ಹೊತ್ತಿಗೆ 'ಸ್ಪಷ್ಟವಾಗಿ ಯೋಚಿಸುವ, ಭ್ರಮೆಗಳಿಲ್ಲದೇ ಬದುಕುವ ಸಾಮರ್ಥ್ಯ' ಗಳಿಸಿದ.

'ಅಸ್ವಸ್ಥ ಮನಸ್ಸು ಹೆಚ್ಚು ಸೃಜನಶೀಲ' ಎಂಬ ತರ್ಕಕ್ಕೆ ಸಾಕ್ಷಿಯಾಗಿ ಜಾನ್ ನ್ಯಾಶ್ ತನ್ನ ಜೀವನದುದ್ದಕ್ಕೂ ಗಣಿತದ ಸಮಸ್ಯೆಗಳನ್ನು ಬಿಡಿಸುತ್ತಲೇ ಬೆಳೆದ. ಆದರೆ ಅವುಗಳನ್ನು ಸ್ಪಷ್ಟವಾಗಿ ಆತ ಬೇರೆಯವರಿಗೆ ಕ್ರಮಬದ್ಧವಾಗಿ ತಿಳಿಸಲಾಗಿದ್ದು ಮಾತ್ರ 1994ರ ನಂತರವೇ. ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಇಂದಿಗೂ ಉದ್ಯೋಗದಲ್ಲಿರುವ ಜಾನ್ ನ್ಯಾಶ್ 'ಗಣಿತ ಕೊಠಡಿಯ ಭೂತ' ಎಂದೇ ಪ್ರಸಿದ್ಧ. ರಾತ್ರಿ ಹೊತ್ತು ತನ್ನ ತರ್ಕ ವಿಚಾರಗಳನ್ನು ಕೊಠಡಿಯ ಕಪ್ಪು ಹಲಗೆಗಳ ಮೇಲೆಲ್ಲಾ ತುಂಬಿಸಿ ಬಿಡುತ್ತಿದ್ದ ನ್ಯಾಶ್! ಅರ್ಥಶಾಸ್ತ್ರ ಜಗತ್ತಿಗೆ ನ್ಯಾಶ್‌ನ ಕೊಡುಗೆ ಬೆಟ್ಟದಷ್ಟು. 1994ರಲ್ಲಿ ಆತನಿಗೆ ನೊಬೆಲ್ ಪಾರಿತೋಷಕ ಕಿರೀಟ ದಕ್ಕಿತು.

ಕೌಟುಂಬಿಕವಾಗಿ ಬಳಲಿದ್ದ ಎಲಿಸಿಯಾ ಮತ್ತು ನಿರ್ಭಾವುಕನಾಗಿದ್ದ ನ್ಯಾಶ್ ನಿಜವಾದ ಅರ್ಥದಲ್ಲಿ ಮತ್ತೆ ಒಂದಾಗಿದ್ದು ಈ ನೋಬೆಲ್ ಪಾರಿತೋಷಕ ಸಿಕ್ಕ ನಂತರವೇ. ನೋಬೆಲ್ ಪ್ರಶಸ್ತಿ ಸ್ವೀಕರಿಸುವಾಗ ನ್ಯಾಶ್ ಹೇಳಿದ ಮಾತುಗಳು ಹೀಗಿವೆ: 'ನನಗೆ ಭಾಷಣ ಮಾಡಲು ಇಷ್ಟವಿಲ್ಲ. ಆದರೆ ಮೂರು ಸಂಗತಿಗಳನ್ನು ನಾನು ಹೇಳಬೇಕಾಗಿದೆ. ಕ್ರೆಡಿಟ್ ಕಾರ್ಡಿಗಾಗಿ ನನ್ನ ಆರ್ಥಿಕ ಪರಿಸ್ಥಿತಿ ಈ ಪಾರಿತೋಷಕದಿಂದ ಮೇಲೇರಬಹುದೆಂದು ನಂಬಿದ್ದೇನೆ. ಎರಡನೆಯದು, ನನಗೆ ಇದನ್ನು ಹಂಚಿಕೊಳ್ಳಲು ತುಂಬಾ ಸಂತೋಷವಾಗುತ್ತಿದೆ ಎಂದು ಹೇಳಬೇಕಾಗಿದೆ. ಆದರೆ ನನಗೊಬ್ಬನಿಗೇ ಇದು ಬಂದಿದ್ದರೆ ಇನ್ನೂ ಹೆಚ್ಚಿನ ದುಡ್ಡು ನನ್ನದಾಗುತ್ತಿತ್ತು! ಮೂರನೆಯದಾಗಿ ತುಂಬಾ ಬೌದ್ಧಿಕವಾದ ನನ್ನ ಗೇಮ್ ಥಿಯರಿಯಿಂದ ಕಿಂಚಿತ್ತಾದರೂ ಪ್ರಾಯೋಗಿಕವಾದ ಉಪಯೋಗ ಆದರೆ ಅದು ನಿಜಕ್ಕೂ ಆಶ್ಚರ್ಯಕರ'!

–ನ್ಯಾಶ್‌ನ ಈ ಭಾಷಣಕ್ಕೆ ಸಭೆ ನಗಬೇಕೋ ಬೇಡವೋ ತಿಳಿಯದೆ ಕುಳಿತಿತ್ತಂತೆ!

ಮೇ 24ರಂದು ವಿಶ್ವ ಸ್ಕಿಜೋಫ್ರೀನಿಯಾ ದಿನವಾದರೆ ಜೂನ್ 13, ನ್ಯಾಶ್‌ನ ಜನ್ಮದಿನ. 80ರ ಅಜ್ಜ ನ್ಯಾಶ್ ಇಂದಿಗೂ ಗಣಿತಲೋಕದಲ್ಲಿ ಸಕ್ರಿಯ. ಮನೋರೋಗದಿಂದ ನರಳುತ್ತಿರುವ, ನಮ್ಮ ಕೈಲಿ ಏನೂ ಸಾಧ್ಯವಿಲ್ಲ ಎನ್ನುವ ಅಸಂಖ್ಯಾತರಿಗೆ ಮಾದರಿಯಾಗಿರುವ ನ್ಯಾಶ್‌ನನ್ನು ನೆನಪಿಸಿಕೊಳ್ಳಲು ಇದು ಸಕಾಲ. ■